# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/240/15-16

ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಭೀಮನಗೌಡ ತಂದೆ ಲೇಟ್ ನಾಗನಗೌಡ<br>2)ಶ್ರೀ ಎನ್ ತಿಪ್ಪನಗೌಡ ತಂದೆ ಲೇಟ್ ನಾಗನಗೌಡ<br>3)ಶ್ರೀ ಎನ್ ಮಲ್ಲಿಕಾರ್ಜುನ ತಂದೆ ಲೇಟ್ ನಾಗನಗೌಡ<br>4)ಶ್ರೀ ಎನ್ ಜಂಬನಗೌಡ ತಂದೆ ಲೇಟ್ ನಾಗನಗೌಡ<br>ಎಲ್ಲಾರ ವಾಸ ದಾಸರನಾಗೇನಹಳ್ಳಿ ಗ್ರಾಮ ಬಳ್ಳಾರಿ ತಾ,<br>**ಶ್ರೀ ಜಿ.ಅಮರೇಶ ವಕೀಲರು ಬಳ್ಳಾರಿ** | ತಹಶೀಲ್ದಾರರು ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ದಾಸರನಾಗೇನಹಳ್ಳಿ | 101/ಎ ಪೈಕಿ | 1.02 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಮೋಕಾ ಇವರ ಎಂಆರ್ ನಂ ಹೆಚ್ 26/15-16 ದಿನಾಂಕ 12/02/2016 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:16-09-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ದಾಸರನಾಗೇನಹಳ್ಳಿ ಗ್ರಾಮದ ಸ.ನಂ 101/ಎ ಪೈಕಿ ವಿಸ್ತೀರ್ಣ: 1.02 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮೋಕಾ ಇವರ ಎಂಆರ್ ನಂ ಹೆಚ್ 26/15-16 ದಿನಾಂಕ 12-02-2016 ರಲ್ಲಿ ನೊಂದಾಯಿತ ಪಾಲುವಿಭಾಗ ಪತ್ರದಂತೆ ನಮೂದಿಸದೆ ತಪ್ಪಾಗಿ ನಮೂದಾಗಿರುವ ಕುರಿತಾಗಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ , ಅಪೀಲುದಾರರು ಒಂದೇ ಕುಟುಂಬದ ಸದಸ್ಯರಾಗಿದ್ದು, ಸದರಿ ಜಮೀನನ್ನು ನೊಂದಾಯಿತ ಪಾಲುವಿಭಾಗ ಪತ್ರ ಸಂಖ್ಯೆ 11217/15-16 ದಿನಾಂಕ 04-12-2015 ರನ್ವಯ ಮೇಲ್ಮನವಿದಾರರು (1) ಮತ್ತು (2) ಇವರುಗಳಿಗೆ ಸ.ನಂ 101/ಎ (ಪೈಕಿ) ವಿಸ್ತೀರ್ಣ 00.50 ಎಕರೆ ಜಮೀನನ್ನು ಜಂಟಿಯಾಗಿ ನಮೂದಿಸಿ ಹಾಗೂ ಮೇಲ್ಮನವಿದಾರರು (3) ಮತ್ತು (4) ಇವರುಗಳಿಗೆ ಪ್ರತಿ ತಲಾ ಒಬ್ಬರಿಗೆ 00.26 ಸೆಂಟ್ಸ್ ಜಮೀನಿನಂತೆ ನಮೂದಿಸಿ ನೊಂದಾಯಿತ ಪಾಲುಪತ್ರ ಹೊಂದಿದ್ದು, ಸದರಿ ಪಾಲು ಪತ್ರದಂತೆ ಕಂದಾಯ ದಾಖಲೆಗಳಲ್ಲಿ ಹಕ್ಕುದಾಖಲಿಸುವಂತೆ ಕೋರುತ್ತಾರೆ.

ಮುಂದುವರೆದು ಸದರಿ ವಿವಾದಾಸ್ಪದ ಪ್ರಕರಣವು ರಿಜಿಸ್ಟರ್ ಪಾಲುವಿಭಾಗ ಹಾಗೂ ಜೆ-ಸ್ಲಿಪ್ ವ್ಯಾಪ್ತಿಗೆ ಒಳಪಟ್ಟಿದ್ದು ಕಾರಣ ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ